# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1951(2243)
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 26.03.2026
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯದಲ್ಲಿ ನೇರ ನೇಮಕಾತಿಯಾದ ಅಧಿಕಾರಿ ಸಿಬ್ಬಂದಿಗಳ ಪೈಕಿ ಇಲ್ಲಿಯವರೆಗೆ ಪದೋನ್ನತಿ ಹೊಂದಿದ ಅಧಿಕಾರಿ ಸಿಬ್ಬಂದಿಗಳೆಷ್ಟು? ಅಂತಹ ಇಲಾಖೆಗಳು ಯಾವುವು; ಅದಕ್ಕೆ ಕಾರಣಗಳೇನು; | ರಾಜ್ಯ ಸಿವಿಲ್ ಸೇವೆಯಲ್ಲಿನ ನೇಮಕಾತಿಗೊಂಡ ಎಲ್ಲಾ ವರ್ಗದ ನೌಕರರಿಗೆ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮುಂಬಡ್ತಿ ನೀಡಲು ಆಸ್ಪದ ಕಲ್ಪಿಸಲಾಗಿರುತ್ತದೆ ಮತ್ತು ನೌಕರರ ಅರ್ಹತೆ ಮತ್ತು ಜೇಷ್ಠತೆಯನುಸಾರ ಮುಂಬಡ್ತಿ ರಿಕ್ತ ಸ್ಥಾನಗಳ ಲಭ್ಯತೆಗೆ ಅನುಗುಣವಾಗಿ ಮುಂಬಡ್ತಿ ನೀಡಲಾಗುತ್ತದೆ. |
| ಆ) ವಿವಿಧ ಇಲಾಖೆಗಳಲ್ಲಿ ನೇರ ನೇಮಕಾತಿ ಮೂಲಕ ನೇಮಕಾತಿಯಾದ ಅಭ್ಯರ್ಥಿಗಳ ಜೇಷ್ಠತೆ ನಿಗದಿ ಮಾಡುವ ಸಂದರ್ಭದಲ್ಲಿ ಪ್ರಸ್ತುತ ಜಾರಿಯಲ್ಲಿರುವ ನಿಯಮಗಳು ಮತ್ತು ಮಾರ್ಗಸೂಚಿಗಳೇನು; | ನೇರ ನೇಮಕಾತಿ ಮೂಲಕ ನೇಮಕಾತಿಯಾದ ಅಭ್ಯರ್ಥಿಗಳ ಜೇಷ್ಠತೆಯನ್ನು ನಿಗದಿಪಡಿಸಲು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರ ನಿಯಮ 5ರಲ್ಲಿ ಮಾರ್ಗಸೂಚನೆಗಳನ್ನು ನೀಡಲಾಗಿರುತ್ತದೆ. (ಅನುಬಂಧ 1 ರಲ್ಲಿ) |
| ಇ) ಜೇಷ್ಠತೆ ನಿಗದಿ ಮಾಡುವ ಹಂತದಲ್ಲಿ ಕಾನೂನು ಇಲಾಖೆಯ ಜವಾಬ್ದಾರಿ ಏನು; ಹಾಗೂ ಕಾನೂನು ಇಲಾಖೆಯ ಅಭಿಪ್ರಾಯ ಕಡ್ಡಾಯವಾಗಿ ಪಡೆಯಬೇಕೆಂಬ ನಿಯಮವಿದೆಯೇ; ಇದ್ದರೆ ಯಾವ ಇಲಾಖೆಗಳು ಕಳೆದ ಮೂರು ವರ್ಷಗಳಲ್ಲಿ ಈ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಪಡೆದಿವೆ; | ಜೇಷ್ಠತೆಯನ್ನು ನಿಗದಿಪಡಿಸುವ ಸಂದರ್ಭದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯುವ ಅವಶ್ಯಕತೆ ಇರುವುದಿಲ್ಲ. ಜೇಷ್ಠತೆ ನಿಗದಿಪಡಿಸುವುದು ಆಡಳಿತ ಇಲಾಖೆಯ ಕರ್ತವ್ಯವಾಗಿದ್ದು, ಇದರಲ್ಲಿ ಕಾನೂನಾತ್ಮಕ ಅಂಶಗಳು ಯಾವುದು ಇರುವುದಿಲ್ಲ. |
| ಈ) ನೇರ ನೇಮಕಗೊಂಡ ಅಭ್ಯರ್ಥಿಗಳ ಜೇಷ್ಠತೆ ಪಟ್ಟಿ ಕುರಿತು ವಿವಿಧ ನ್ಯಾಯಾಲಯಗಳು ನೀಡಿರುವ ತೀರ್ಪುಗಳ/ಆದೇಶಗಳ ಸಾರಾಂಶವೇನು; ಆ ಆದೇಶಗಳ ಅನುಸರಣೆ ಕುರಿತು ಎಲ್ಲಾ ಇಲಾಖೆಗಳಿಗೆ ಕಾನೂನು ಇಲಾಖೆಯಿಂದ ಸಮಗ್ರ ಮಾರ್ಗದರ್ಶನ ನೀಡಲಾಗಿದೆಯೇ; | ನೇರ ನೇಮಕಗೊಂಡ ಅಭ್ಯರ್ಥಿಗಳ ಜೇಷ್ಠತಾ ಪಟ್ಟಿ ಕುರಿತು ಮಾನ್ಯ ನ್ಯಾಯಾಲಯವು ನೀಡುವ ಆದೇಶಗಳು ಸಂದರ್ಭೋಚಿತವಾಗಿರುತ್ತದೆ, ನಿಗದಿತ ಆದೇಶವಾಗಿರುವುದಿಲ್ಲ. ಮುಂದುವರೆದು, ಜೇಷ್ಠತಾ ಪಟ್ಟಿಯನ್ನು ನಿಗದಿಪಡಿಸಲು ಈಗಾಗಲೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೇವಾ ನಿಯಮಗಳು ವಿಭಾಗದಿಂದ ಹೊರಡಿಸಲಾಗಿರುವ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರ ನಿಯಮದನ್ವಯ ಮಾನ್ಯ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಿ ಆಡಳಿತ ಇಲಾಖೆಗಳು ಕ್ರಮ ಕೈಗೊಳ್ಳಬೇಕಾಗುತ್ತದೆ ಈ ಹಿನ್ನೆಲೆಯಲ್ಲಿ, ಜೇಷ್ಠತೆಯನ್ನು ನಿಗದಿಪಡಿಸುವ ಬಗ್ಗೆ ಕಾನೂನು ಇಲಾಖೆಯಿಂದ ಯಾವುದೇ ಮಾರ್ಗಸೂಚನೆಯನ್ನು ಹೊರಡಿಸಿರುವುದಿಲ್ಲ. |
| ಉ) ನೇರ ನೇಮಕಾತಿಯ ಸಂದರ್ಭದಲ್ಲಿ ದಾಖಲಾತಿ ಪರಿಶೀಲನೆಗೆ ಹಾಜರಾಗದವರು ಅಥವಾ ನೇಮಕಾತಿ ಪತ್ರ ಪಡೆದರೂ ಹುದ್ದೆಗೆ ವರದಿಯಾಗದವರ ಸ್ಥಾನಕ್ಕೆ ಮೆರಿಟ್ ಪಟ್ಟಿಯಲ್ಲಿರುವ ಮುಂದಿನ ಅನುಕ್ರಮದ ಅಭ್ಯರ್ಥಿಗಳಿಗೆ ನೇಮಕಾತಿ ನೀಡಿದ್ದಲ್ಲಿ, ಜೇಷ್ಠತಾ ಪಟ್ಟಿಯಲ್ಲಿ ಅವರಿಗೆ ಯಾವ ರೀತಿಯಲ್ಲಿ ಅನುಕ್ರಮ ಸಂಖ್ಯೆ ನೀಡಬೇಕು ಎಂಬ ಕುರಿತು ಜಾರಿಯಲ್ಲಿರುವ ನಿಯಮಗಳಾವುವು; | ಕರ್ನಾಟಕ ನಾಗರಿಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು, 2021 ರ ನಿಯಮ 12ರಲ್ಲಿ, 11ನೇ ನಿಯಮದ (2)ನೇ ಉಪ ನಿಯಮದ ಮೇರೆಗೆ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರುಗಳು (ಗಳಿಸಿರುವ ಅಂಕಗಳು) ಇರುವ ಕ್ರಮದಲ್ಲಿ ನೇಮಕಾತಿ ಮಾಡಲು ಆಸ್ಪದ ಕಲ್ಪಿಸಲಾಗಿದೆ.<br><br>ಸದರಿ ನಿಯಮದ 11ನೇ ನಿಯಮದ (3)ನೇ ಉಪನಿಯಮದನ್ವಯ ಸೇರಿಕೆ ಸಮಯವನ್ನು ನಿರ್ದಿಷ್ಟಪಡಿಸಿದ ಅಥವಾ ಸಂದರ್ಭಾನುಸಾರ ವಿಸ್ತರಿಸಿದ ಕಾಲಾವಧಿಯ ಒಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಅಂತಿಮ ಪಟ್ಟಿಯಲ್ಲಿ ಸೇರಿದ ಅಭ್ಯರ್ಥಿಗಳಿಗೆ ಅನ್ವಯವಾಗುವಂತೆ, ನೇಮಕಾತಿ ಪ್ರಾಧಿಕಾರವು, ಆಯ್ಕೆ ಪ್ರಾಧಿಕಾರವು ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಅಂತಹ ಸಂದರ್ಭದಲ್ಲಿ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಯನ್ನು ಕರ್ತವ್ಯಕ್ಕೆ ವರದಿ |

| | |
|---|---|
| | ಮಾಡಿಕೊಳ್ಳದಿರುವ ಅಭ್ಯರ್ಥಿಯು ಆಯ್ಕೆಯಾಗಿದ್ದ, ನೇರ ಮತ್ತು ಸಮತಳ ಮೀಸಲಾತಿಯ ಅದೇ ವರ್ಗಕ್ಕೆ ಸೇರಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ.<br><br>ಮುಂದುವರೆದು, ಮುಖ್ಯ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರದಲ್ಲಿ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಚಾಲನೆಗೊಳಿಸಿ ಆಯಾ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳನ್ನು ಹೆಚ್ಚುವರಿ ಪಟ್ಟಿಯ ಮೂಲಕ ಆಯ್ಕೆ ಮಾಡಿ ಸದರಿ ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದರಿಂದ ಮುಖ್ಯ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳು ಸೇವಾ ಜೇಷ್ಠತೆಯಲ್ಲಿ ಹಿರಿಯರಾಗುತ್ತಾರೆ. ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ಸೇವಾ ಜೇಷ್ಠತೆಯಲ್ಲಿ ಕಿರಿಯರಾಗಿರುತ್ತಾರೆ. |
| ಆಅ) ರಾಜ್ಯದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಜೇಷ್ಠತೆಯ ನಿರ್ಧಾರದಲ್ಲಿ ಏಕತೆಯ ಕೊರತೆಯಿಂದ ವಿವಿಧ ಇಲಾಖೆಗಳ ವಿರುದ್ಧ ನ್ಯಾಯಾಲಯಗಳಲ್ಲಿ ಪ್ರಕರಣಗಳು ಹೆಚ್ಚುತಿರುವುದು ನಿಜವೇ; ಈ ಕುರಿತು ಮುಂದಿನ ದಿನಗಳಲ್ಲಿ ಸಮಸ್ಯೆ ಉದ್ಭವಾಗದಂತೆ ಕಾನೂನು ಇಲಾಖೆ ಕೈಗೊಂಡಿರುವ ಮುನ್ನೆಚ್ಚರಿಕಾ ಕ್ರಮಗಳು ಯಾವುವು? | ಯಾವುದೇ ಇಲಾಖೆಯ ಯಾವುದೇ ವೃಂದದ ಜೇಷ್ಠತೆಯನ್ನು ನಿಗದಿಪಡಿಸಲು ಏಕರೂಪದ ಜೇಷ್ಠತಾ ನಿಯಮವನ್ನು ರಚಿಸಿದ್ದು, ಅದರನ್ವಯವೇ ಜೇಷ್ಠತೆಯನ್ನು ನಿಗದಿಪಡಿಸಲಾಗುತ್ತದೆ ಹಾಗೂ ಯಾವುದೇ ನ್ಯಾಯಾಲಯ ಪ್ರಕರಣಗಳು ದಾಖಲಾಗಬಾರದು ಎಂಬ ಉದ್ದೇಶದಿಂದಲೇ ಎಲ್ಲಾ ಇಲಾಖೆಗಳು ಎಲ್ಲಾ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ನೌಕರರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಸಹ ನೀಡುತ್ತದೆ. ನಂತರದಲ್ಲಿ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರವಷ್ಟೇ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. |

**ಸಂಖ್ಯೆ: ಸಿಆಸುಇ 108 ಸೇಹಿನಿ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ